**1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಹಾಗೂ ಜೆ. ಎಂ. ಎಫ್.ಸಿ. ನ್ಯಾಯಾಲಯ, ಬೇಲೂರು**

**ಅಸಲು ದಾವಾ ನಂ.** 176/2021 **ಡಿ ಡಬ್ಲ್ಯೂ :** 1

**(ಇಂದು ದಿನಾಂಕಃ 27.02.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.)**

ಪಾಟೀ ಸವಾಲುಃ- ವಾದಿ ಪರ ಶ್ರೀ. ಎಚ್.ಸಿ.ಕೆ. ವಕೀಲರಿಂದ.

ನಾನು ಎಸ್.ಎಸ್.ಎಲ್.ಸಿ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ವ್ಯವಸಾಯ ಮಾಡುತ್ತೇನೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿರುವ ವಿಚಾರಗಳು ಗೊತ್ತು. ಅದನ್ನು ಬರೆಯಲು ನಾನೇ ಮಾಹಿತಿ ಕೊಟ್ಟಿರುತ್ತೇನೆ. ನನ್ನ ತಂದೆ ಸರ್ವೇ ನಂಬರ್ 90ರಲ್ಲಿ ಆಸ್ತಿ ಮಂಜೂರು ಮಾಡಬೇಕೆಂದು ಅರ್ಜಿ ಹಾಕಿದ್ದರು ಎಂದು ಹೇಳಿರುತ್ತೇನೆ, ಸದರಿ ಅರ್ಜಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ಹಾಜರುಪಡಿಸಿರುತ್ತೇನೆಂದು ಉತ್ತರಿಸುತ್ತಾರೆ. ನನ್ನ ತಂದೆ ಕಾಲಂ 53 ಅಥವಾ 57 ರಲ್ಲಿ ಅರ್ಜಿ ಸಲ್ಲಿಸಿದ್ದಾರಾ ಎಂದರೆ ಸಾಕ್ಷಿಯು 51 ಮತ್ತು 53 ರಲ್ಲಿ ಅರ್ಜಿ ಸಲ್ಲಿಸಿರುತ್ತಾರೆ ಎಂದು ಉತ್ತರಿಸುತ್ತಾರೆ. ಅದಕ್ಕೆ ಸಂಬಂಧಪಟ್ಟಂತೆ ಯಾವುದೇ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಅಂದರೆ ಸರಿಯಲ್ಲ. ನನ್ನ ತಂದೆಯ ಹೆಸರಿನಲ್ಲಿ ಎಷ್ಟು ಜಮೀನು ಇದೆ ಎಂದರೆ ಸಾಕ್ಷಿಯು 1 ಮುಕ್ಕಾಲು ಎಕರೆ ಇದೆ ಎಂದು ಉತ್ತರಿಸುತ್ತಾರೆ. ನನ್ನ ತಂದೆ ಸುಬ್ಬೇಗೌಡನಿಗೆ ಎಷ್ಟು ಜನ ಮಕ್ಕಳು ಎಂದರೆ ಸಾಕ್ಷಿಯು 5 ಜನ ಎಂದು ಉತ್ತರಿಸುತ್ತಾರೆ. ಅವರೆಂದರೆ ಲಕ್ಷ್ಮೀ, ಮಂಜುಳಾ, ವಿನೋದಾ, ವೀರೆಗೌಡ ಮತ್ತು ಹರೀಶ್. ನಾವೆಲ್ಲರೂ ಈಗಲೂ ಒಟ್ಟು ಕುಟುಂಬದ ಸದಸ್ಯರು ಮತ್ತು ಒಟ್ಟಿಗೆ ವಾಸವಾಗಿದ್ದೇವೆ ಎಂದರೆ ಸರಿಯಲ್ಲ. ಸಾಕ್ಷಿಗೆ ದಿಃ 04/05/2022 ರ ವಿಭಾಗದ ಪತ್ರದ ಪ್ರತಿಯನ್ನು ತೋರಿಸಲು ಸಾಕ್ಷಿಯು ಅದನ್ನು ನೋಡಿ ಗುರುತಿಸಿ ಒಪ್ಪಿ ಕೊಂಡಿದ್ದರಿಂದ ಅದನ್ನು ನಿಪಿ-28 ಎಂದು ಗುರುತಿಸಲಾಯಿತು.

ನಿಪಿ-28 ರ ಪ್ರಕಾರ ನನ್ನ ತಂದೆಯ ಹೆಸರಿನಲ್ಲಿದ್ದ ಒಟ್ಟು 5 ಸರ್ವೇ ನಂ ಆಸ್ತಿಗಳು ನಮ್ಮ ಅಣ್ಣ ತಮ್ಮಂದಿರ ಮಧ್ಯೆ ವಿಭಾಗವಾಗಿರುತ್ತದೆ ಎಂದರೆ ಸರಿ. ಭವ್ಯ ನನ್ನ ಹೆಂಡತಿ ನಿಪಿ-28 ರಲ್ಲಿ ಹೇಳಿರುವ ಆಸ್ತಿಯನ್ನು ಹೊರತುಪಡಿಸಿ ನನ್ನ ತಮ್ಮ ಹರೀಶನ ಹೆಸರಿನಲ್ಲಿ ಸರ್ವೇ ನಂ. 106/15 ರಲ್ಲಿ 10 ಗುಂಟೆ, 48/06 ರಲ್ಲಿ 1 ಎಕರೆ 14 ಗುಂಟೆ, ಮತ್ತು 106/01 ರಲ್ಲಿ 08 ಗುಂಟೆ, ಸರ್ವೇ ನಂ. 106/12 ರಲ್ಲಿ ನನ್ನ ಹೆಸರಿನಲ್ಲಿ 10 ಗುಂಟೆ, ವಿನೋಧಳ ಹೆಸರಿನಲ್ಲಿ ಸರ್ವೇ ನಂ. 13/02 ರಲ್ಲಿ 1 ಎಕರೆ ಮತ್ತು ನನ್ನ ತಂದೆ ಸುಬ್ಬೆಗೌಡರ ಹೆಸರಿನಲ್ಲಿ ಸರ್ವೇ ನಂ. 29/04ಎ

ಸರ್ವೇ ನಂ. ನಲ್ಲಿ 1 ಎಕರೆ ಆಸ್ತಿ ಇರುತ್ತದೆ ಎಂದರೆ ಸಾಕ್ಷಿಯು ನನ್ನ ಮತ್ತು ನನ್ನ ತಂದೆಯ ಹೆಸರಿನಲ್ಲಿ ಇರುತ್ತದೆ. ಬೇರೆಯವರ ಆಸ್ತಿ ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ.

ಸರ್ವೇ ನಂ. 102/05 ರಲ್ಲಿ 6 ಗುಂಟೆ ಆಸ್ತಿ ನನ್ನ ತಂದೆಯ ಹೆಸರಿನಲ್ಲಿದೆ ಎಂದರೆ ಸರಿ. ವಿಭಾಗ ಆಗುವ ಮೊದಲೇ ನನ್ನ ತಂದೆ ಹರೀಶನ ಹೆಸರಿನಲ್ಲಿ ಸರ್ವೇ ನಂ. 105/04 ರಲ್ಲಿ 1 ಎಕರೆ 18 ಗುಂಟೆ ದಾನ ಮಾಡಿಕೊಟ್ಟಿದರೆಂದರೆ ನನಗೆ ಗೋತ್ತಿಲ್ಲ. ನನ್ನ ಹೆಂಡತಿ ಭವ್ಯಳನ ಹೆಸರಿನಲ್ಲಿ ಸರ್ವೇ ನಂ.106/17 ರಲ್ಲಿ 16 ಗುಂಟೆ ಆಸ್ತಿ ಮತ್ತು ಸರ್ವೇ ನಂ. 105/61 ರಲ್ಲಿ 30 ಗುಂಟೆ, 105/60ರಲ್ಲಿ 20 ಗುಂಟೆ ಇರುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸದರಿ ಆಸ್ತಿಯನ್ನು ಅವರು ಖರೀದಿ ಮಾಡಿರುತ್ತಾರೆಂದು ಉತ್ತರಿಸುತ್ತಾರೆ.

ಇವೆಲ್ಲಾ ಆಸ್ತಿಗಳು ಸೇರಿ ನಮ್ಮ ಕುಟುಂಬದಲ್ಲಿ 7 ಎಕರೆ 32 ಗುಂಟೆ ಕ್ಕಿಂತ ಜಾಸ್ತಿ ಆಸ್ತಿ ಇರುತ್ತದೆ ಎಂದರೆ ಸರಿಯಲ್ಲ. ನೆಟ್ಟೆಕೆರೆ ಗ್ರಾಮ ಬೇಲೂರಿನಿಂದ 5 ಕಿ.ಮೀ. ದೂರಲ್ಲಿರುತ್ತದೆ. ಪುರಸಭೆ ವ್ಯಾಪ್ತಿಯಿಂದ 5 ಕಿ.ಮೀ ಒಳಗೆ ಯಾವುದೇ ಆಸ್ತಿಯನ್ನು ಮಂಜೂರು ಮಾಡಬಾರದೆಂದು ಸುತೋಲೆ ಇದೆ ಎಂದರೆ ನನಗೆ ಗೋತ್ತಿಲ್ಲ. ನಾವು ನಮ್ಮ ಪ್ರತಿವಾದಿ ಪತ್ರದಲ್ಲಿ ನಾವು ಸರ್ವೇ ನಂ. 90 ರಲ್ಲಿ 2 ಎಕರೆ 8 ಗುಂಟೆ ಆಸ್ತಿಯ ಸ್ವಾಧೀನಲ್ಲಿ ಇರುತ್ತವೆ ಎಂದು ಹೇಳಿರುತ್ತೇನೆ, ಆದ್ದರೆ ಚಕ್ಕುಬಂದಿ ತೋರಿಸಿರುವುದಿಲ್ಲ ಎಂದರೆ ಸಾಕ್ಷಿಯು ಮಂಜೂರು ಆದ ನಂತರ ಚಕ್ಕುಬಂಧಿ ಕೊಡುತ್ತಾರೆಂದು ಉತ್ತರಿಸುತ್ತಾರೆ.

ಯಾವ ವರ್ಷದಲ್ಲಿ ನನ್ನ ತಂದೆ ಮಂಜೂರಾತಿಗೆ ಅರ್ಜಿ ಸಲ್ಲಿಸಿದರು ಎಂದರೆ ಸಾಕ್ಷಿಯು ದಾಖಲೆ ಕೊಟ್ಟಿರುತ್ತೇನೆ ಎಂದು ಉತ್ತರಿಸುತ್ತಾರೆ. ನಾನು ದಾಖಲೆಗಳನ್ನು ಹಾಜರುಪಡಿಸುವ ಮೊದಲು ಅದನ್ನು ಪರಿಶೀಲನೆ ಮಾಡಿರುತ್ತೇನೆ. ನನ್ನ ತಂದೆಯ ಕೊಟ್ಟ ಅರ್ಜಿಗೆ ಸಂಬಂದಪಟ್ಟಂತೆ ನಕ್ಷೆ ಆಗಿರುತ್ತದೆ. ನಕ್ಷೆಯ ಪ್ರಕಾರ ಪೂರ್ವ ಯಾರ ಇದ್ದಾರೆ ಎಂದರೆ ಸಾಕ್ಷಿಯು ಕೇಶವಯ್ಯ ಬಿನ್ ಚೆನ್ನಯ್ಯ ರವರ ಆಸ್ತಿ ಇದೆ, ಪಶ್ಚಿಮಕ್ಕೆ ಗಂಗಮ್ಮನ ಆಸ್ತಿ, ಉತ್ತರಕ್ಕೆ ವಿಶ್ವನಾಥರವರ ಆಸ್ತಿ ಮತ್ತು ದಕ್ಷಿಣಕ್ಕೆ ಕೊಡಮ್ಮ ಮತ್ತು ಚೆನ್ನಯ್ಯರವರ ಆಸ್ತಿ ಇರುತ್ತದೆ. ಯಾವ ಯಾವ ದಿಕ್ಕಿನಲ್ಲಿ ಎಷ್ಟು ಆಸ್ತಿಗಳ ಸ್ವಾಧೀನಲ್ಲಿ ಇದ್ದೇನೆ ಎಂದು ಬರೆಯಲು ತೊಂದರೆ ಇತ್ತಾ ಎಂದರೆ ಸಾಕ್ಷಿಯು ಬರೆಯಬೇಕೆಂದು ನನಗೆ ಗೋತ್ತಿರಲಿಲ್ಲ ಎಂದು ಉತ್ತರಿಸುತ್ತಾರೆ.

ಈ ದಾವಾ ದಾಖಲು ಮಾಡುವ ಮೊದಲು ಈ ಪ್ರಕರಣ ವಾದಿ ನನಗೆ ನಿಪಿ-14 ರಂತೆ ನೋಟೀಸು ಕೊಟ್ಟಿದ್ದರು ಎಂದರೆ ಸರಿ. ಸದರಿ ನೋಟಿಸಿಗೆ ನಾನು ಉತ್ತರ ಕೊಟ್ಟಿರುತ್ತೇನೆ. ಏನ ಎಂದು ಉತ್ತರ ಕೊಟ್ಟೀದ್ದೀರಾ ಎಂದರೆ ಸಾಕ್ಷಿಯು ನಾನೇ ಸ್ವಾಧೀನದಲ್ಲಿ ಇದ್ದೇನೆಂದು ಉತ್ತರ

ಕೊಟ್ಟಿರುತ್ತೇನೆಂದು ಉತ್ತರಿಸುತ್ತಾರೆ. ಸದರಿ ಉತ್ತರವನ್ನು ನಾನು ನನ್ನ ವಕೀಲರಾದ ಚಂದ್ರಶೇಖರವರಿಗೆ ಹೇಳಿ ಬರೆಸಿರುತ್ತೇನೆ. ಸದರಿ ಮರು ಉತ್ತರವನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಾನು ಸದರಿ ಮರು ಉತ್ತರವನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ವಾದಿ ದಾವಾ ಆಸ್ತಿಯಲ್ಲಿ ಹೇಳಿರುವ ಚಕ್ಕುಬಂದಿಯನ್ನು ನಾನು ನೋಡಿಲ್ಲ. ಅವರ ಚಕ್ಕುಬಂಧಿ ನನಗೆ ಗೋತ್ತಿರುವುದಿಲ್ಲ. ವಾದಿ ಮತ್ತು ನಾನು ಸಂಬಂಧಿಕರಲ್ಲ. ವಾದಿ ನಮ್ಮ ಊರಿನವರು ಎಂದರೆ ಸರಿ. ಅವರನ್ನು ನನಗೆ ಬುದ್ಧಿ ಬಂದಾಗಿನಿಂದಲೂ ನೋಡುತ್ತಿದ್ದೇನೆ.

**ಮುಂದುವರೆದ ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು ಮುಂದುಾಡಲಾಯಿತು.**

**ಮರುವಿಚಾರಣೆಃ-- ಇಲ್ಲಾ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

**ಓ.ಹೇ.ಕೇ. ಸರಿ ಇದೆ.**

**1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ. ನ್ಯಾಯಾಲಯ, ಬೇಲೂರು**

ಅಸಲು ದಾವಾ ನಂ. : 176 ಡಿ ಡಬ್ಲ್ಯೂ :1